# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1734 (2110) |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17/03/2022 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡದಿರಲು ಕಾರಣವೇನು; | ಕಾರ್ಮಿಕ ಇಲಾಖೆಯಲ್ಲಿ ನೇರ ನೇಮಕಾತಿ ಕೋಟಾದಡಿ ಬಾಕಿ ಇರುವ ಗ್ರೂಪ್ 'ಎ'. 'ಬಿ' ಮತ್ತು 'ಸಿ' ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಹಮತಿ ಪಡೆದ ನಂತರ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.<br>ಆಯುಕ್ತಾಲಯದಿಂದ ನೇರ ನೇಮಕಾತಿ ಕೋಟಾದಡಿ ಖಾಲಿ ಇದ್ದ ಗ್ರೂಪ್ 'ಎ' ವೃಂದದ ಸಹಾಯಕ ಕಾರ್ಮಿಕ ಆಯುಕ್ತರ 02 ಹುದ್ದೆಗಳು ಮತ್ತು ಗ್ರೂಪ್ 'ಬಿ' ವೃಂದದ ಕಾರ್ಮಿಕ ಅಧಿಕಾರಿಗಳ 04 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯಂತೆ ಆಯೋಗವು ಸದರಿ ಹುದ್ದೆಗಳ ಭರ್ತಿಗಾಗಿ ಫೆಬ್ರವರಿ-2021ರ ಮಾಹೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ್ದು, ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ.<br>ಅದೇ ರೀತಿ ಆಯುಕ್ತಾಲಯದಿಂದ ನೇರ ನೇಮಕಾತಿ ಕೋಟಾದಡಿ ಖಾಲಿಯಿರುವ 26 ಕಾರ್ಮಿಕ ನಿರೀಕ್ಷಕರ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯಂತೆ ಆಯೋಗವು ಸದರಿ ಹುದ್ದೆಗಳ ಭರ್ತಿಗಾಗಿ ಡಿಸೆಂಬರ್-2021ರ ಮಾಹೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ್ದು, ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ.<br>ಮುಂದುವರೆದು, ಉಳಿಕೆ ಮೂಲ ವೃಂದದ ಗ್ರೂಪ್ 'ಸಿ' ವೃಂದದಲ್ಲಿ ಖಾಲಿ ಇದ್ದ ನೇರ ನೇಮಕಾತಿ ಹುದ್ದೆಗಳ ಭರ್ತಿಗೆ ಸಹಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾದ ಹುದ್ದೆಗಳು ಮತ್ತು ಆರ್ಥಿಕ ಇಲಾಖೆಯು ಭರ್ತಿಗಾಗಿ ಸಹಮತಿ ನೀಡಿದ ಹುದ್ದೆಗಳ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಿದೆ. |

| ಕ್ರ ಸಂ | ಖಾಲಿ ಇರುವ ಹುದ್ದೆ | ಸಹಮತಿ ಕೋರಲಾದ ಹುದ್ದೆಗಳ ಸಂಖ್ಯೆ | ಸಹಮತಿ ದೊರೆತಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | ಕಾರ್ಮಿಕ ನಿರೀಕ್ಷಕರು | 66 | 20 |
| 2 | ಪ್ರಥಮ ದರ್ಜೆ ಸಹಾಯಕರು | 28 | 11 |
| 3 | ದ್ವಿತೀಯ ದರ್ಜೆ ಸಹಾಯಕರು | 32 | 17 |
| 4 | ಶೀಘ್ರಲಿಪಿಗಾರರು | 28 | 12 |
| 5 | ಬೆರಳಚ್ಚುಗಾರರು | 24 | 03 |
| | ಒಟ್ಟು | 178 | 63 |

ಉಳಿಕೆ ಮೂಲ ವೃಂದದಲ್ಲಿ ಖಾಲಿ ಇದ್ದ ಗ್ರೂಪ್ 'ಸಿ' ವೃಂದಗಳ 178 ಹುದ್ದೆಗಳ ಪೈಕಿ 63 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆ ಸಹಮತಿ ನೀಡಿರುತ್ತದೆ. ಇವುಗಳ ಪೈಕಿ 48 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗು 15 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸಹಮತಿ ನೀಡಿರುತ್ತದೆ. ಅದರಂತೆ, ದಿನಾಂಕ: 09.02.2022 ರಂದು 48 ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಒಟ್ಟಾರೆಯಾಗಿ 80 ಹುದ್ದೆಗಳು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೆ ಬಾಕಿ ಇರುತ್ತವೆ.

ಕಲ್ಯಾಣ ಕರ್ನಾಟಕ ಪ್ರಾದೇಶಿಕ ವೃಂದದ ನೇರ ನೇಮಕಾತಿ ವೃಂದ ಬಲದ ಶೇಕಡ 80 ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಯಾ ಆಡಳಿತ ಇಲಾಖಾ ಮಟ್ಟದಲ್ಲಿ ಕ್ರಮ ವಹಿಸಲು ಆರ್ಥಿಕ ಇಲಾಖೆಯು ದಿನಾಂಕ: 24.11.2021 ರಂದು ಸುತ್ತೋಲೆ ಹೊರಡಿಸಿದ್ದು, ಅದರಂತೆ ಉಳಿಕೆ ಮೂಲ ವೃಂದದ ಕಾರ್ಮಿಕ ನಿರೀಕ್ಷಕರ 10 ಹುದ್ದೆಗಳು, ಪ್ರಥಮ ದರ್ಜೆ ಸಹಾಯಕರ 02 ಹುದ್ದೆಗಳು ಮತ್ತು ದ್ವಿತೀಯ ದರ್ಜೆ ಸಹಾಯಕರ 02 ಹುದ್ದೆಗಳು, ಶೀಘ್ರಲಿಪಿಗಾರರ 03 ಹುದ್ದೆಗಳು, ಬೆರಳಚ್ಚುಗಾರರ 02 ಹುದ್ದೆಗಳು, ವಾಹನ ಚಾಲಕರ 01 ಹುದ್ದೆ, ಆಫೀಸ್ ಅಟೆಂಡರ್ ಗ್ರೇಡ್-1 04 ಹುದ್ದೆಗಳು, ಆಫೀಸ್ ಅಟೆಂಡರ್ 16 ಹುದ್ದೆಗಳು, ಕಾವಲುಗಾರರ 01 ಹುದ್ದೆ ಸೇರಿದಂತೆ ಒಟ್ಟು 41 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಆಯುಕ್ತಾಲಯದಲ್ಲಿ ನೇರ ನೇಮಕಾತಿ ಕೋಟಾದಡಿಯ ಗ್ರೂಪ್ 'ಎ' ವೃಂದದ ಸಹಾಯಕ ಕಾರ್ಮಿಕ ಆಯುಕ್ತರ 05 ಹುದ್ದೆಗಳು ಮತ್ತು ಗ್ರೂಪ್ 'ಬಿ' ವೃಂದದ ಕಾರ್ಮಿಕ ಅಧಿಕಾರಿಯ

| | | |
|---|---|---|
| | | 18 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು, ಆರ್ಥಿಕ ಇಲಾಖೆಯು ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ನೀಡಿದ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿಯಮಾನುಸಾರವಾಗಿ ಕ್ರಮವಹಿಸಲಾಗುವುದು.<br><br>ಖಾಲಿ ಇರುವ ಗ್ರೂಪ್ 'ಡಿ' ನೇರ ನೇಮಕಾತಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಂತೆ ಸರ್ಕಾರವು ಈಗಾಗಲೇ ಆದೇಶ ಹೊರಡಿಸಿದ್ದು, ಅದರನ್ವಯ ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. |
| ಆ) | ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ಮತ್ತು ಸಹಾಯಕ ನಿರ್ದೇಶಕರು, ಬಾಯ್ಲರ್‌ಗಳ ಒಟ್ಟು ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು? | ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಕಾರ್ಖಾನೆಗಳ ಹಾಗೂ ಬಾಯ್ಲರುಗಳು ಸಹಾಯಕ ನಿರ್ದೇಶಕರ ಹುದ್ದೆಗಳ ವಿವರ ಈ ಮುಂದಿನಂತಿದೆ. |

| ವಿವರ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | ಬಾಯ್ಲರುಗಳು ಸಹಾಯಕ ನಿರ್ದೇಶಕರು |
|---|---|---|
| ಮಂಜೂರಾದ ಹುದ್ದೆಗಳು | 20 | 04 |
| ಖಾಲಿ ಇರುವ ಹುದ್ದೆಗಳು | 12 | 04 |

ಕಾಇ 184 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು